ಮುಟ್ಟುತ್ತಿದ್ದೇನೆ ಅನ್ನಿಸುತ್ತದೆ. ನಾಸ್ಟಾಲ್ಜಿಯಾದಿಂದ ಹೊರಬಂದು ಬರೆಯಬೇಕು. ಅದು ಯಾವಾಗ ಹೇಗೆ ಸಾಧ್ಯವಾಗುತ್ತದೆ ಎಂದು ಹೇಳುವುದು ಕಷ್ಟ.

ಇನ್ನು ಕಥೆ–ಕಾದಂಬರಿಯ ಪರಿಸರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ದೊಡ್ಡ ಕ್ಯಾನ್ವಾಸ್‌ನ ಬರವಣಿಗೆಯಲ್ಲಿ ವರ್ತಮಾನಕ್ಕೆ ಸ್ಪಂದಿಸಿದಂತೆ ಭೂತಕಾಲಕ್ಕೆ ಸ್ಪಂದಿಸಲು ನನಗೆ ಸಾಧ್ಯವಿಲ್ಲ. ವರ್ತಮಾನದಲ್ಲಿ ಆಗುವ ಬದಲಾವಣೆಗಳಿಗೆ ನನ್ನ ಬರವಣಿಗೆ ಸ್ಪಂದಿಸಲು ಪ್ರಯತ್ನಿಸುತ್ತದೆ. ನನ್ನ ಕಾದಂಬರಿಗಳು ವರ್ತಮಾನದಲ್ಲಿ ಚಲಿಸುತ್ತಿರುವ ಕಥೆಗಳು ಎಂದು ನಾನು ಭಾವಿಸಿದ್ದೇನೆ. ಎಂದೋ ಗತಿಸಿರುವುದನ್ನು ಕಥೆ ಮಾಡಲು ಹೊರಟಾಗ ಪ್ರಶ್ನೆಗಳು ಹುಟ್ಟುತ್ತವೆ. ಯಾರೂ ಹೇಳದೆ ಇರುವುದನ್ನು ಹೇಳಲು ಹೊರಟಿದ್ದೇನಾ ಎನ್ನುವ ಪ್ರಶ್ನೆ ಕಾಡುತ್ತದೆ. ಹಾಗೆ ಭಿನ್ನವಾಗಿ ಹೇಳುವುದು ನನಗೆ ಸಾಧ್ಯವಾಗುತ್ತಿಲ್ಲ. ವಿವೇಕ ಶಾನಭಾಗರ 'ಊರುಭಂಗ' ಕಾದಂಬರಿ ನೋಡಿದರೆ, ಅವರು ವರ್ತಮಾನದ ಎಳೆ ಹಿಡಿದುಕೊಂಡೇ ಭೂತಕಾಲವನ್ನು ನೋಡಿದರು. ಅಂಥದ್ದೊಂದು ತಂತ್ರವಾದರೂ ಸಾಧ್ಯವಾಗಬೇಕು. ಅಂಥ ಕಥಾತಂತ್ರ ಅಥವಾ ವಸ್ತು ನನಗೆ ಸಿಕ್ಕಿಲ್ಲ. ಕೆಲವು ವಸ್ತುಗಳು ಇಂಟರೆಸ್ಟಿಂಗ್ ಅನ್ನಿಸಬಹುದು. ಆದರೆ ಕಾದಂಬರಿ ಚೌಕಟ್ಟಿನಲ್ಲಿ ನೋಡಿದಾಗ ಅದು ಹೊಸತು ಅನ್ನಿಸಿಲ್ಲ.

- **ಕರ್ನಾಟಕದಿಂದ ಆಚೆಗಿದ್ದು ಬರೆಯುವುದರಿಂದ ಬರಹಗಾರನಿಗೆ ಅನುಕೂಲಗಳು ಅನನುಕೂಲಗಳು ಇರುತ್ತವೆ ಅನ್ನಿಸುತ್ತದೆಯೇ?**

ಎನ್‌ಆರ್‌ಐ ಬರಹಗಾರನಾಗಿ ಗುರ್ತಿಸುವುದು ನನಗೆ ಒಪ್ಪಿಗೆಯಿಲ್ಲ. ಅನಿವಾಸಿ ಭಾರತೀಯರು ಪಾಪಪ್ರಜ್ಞೆಯಿಂದ ಬರೆಯುತ್ತಾರೆ ಎಂದು ಕೆಲವರು ಹೇಳಿದ್ದಿದೆ. ಅಂತಹದ್ದೇನೂ ಈಗ ಇಲ್ಲ. ಈ ಸೋಷಿಯಲ್ ಮೀಡಿಯಾ ಯುಗದಲ್ಲಿ ಅಲ್ಲಿರುವುದು ಇಲ್ಲಿರುವುದು ಎನ್ನುವುದನ್ನೆಲ್ಲ ನಾನು ನಿರಾಕರಿಸುತ್ತೇನೆ. 'ಬರೆಯುವುದು ಯಾರಿಗಾಗಿ, ಓದುಗರಿಗೆ ನನ್ನ ಬರವಣಿಗೆ ತಲುಪುತ್ತದಾ' ಎನ್ನುವ ಪ್ರಶ್ನೆಗಳು ನನ್ನನ್ನು ಮೊದಲು ಕಾಡುತ್ತಿದ್ದವು. ಈಗ ಅಂಥ ಗೊಂದಲಗಳಿಲ್ಲ.

ನನ್ನ ಕೃತಿಗಳಲ್ಲಿ ಪಾತ್ರ– ಪರಿಸರ ಅಷ್ಟೇ ಅಮೆರಿಕ. ಕಥೆ ಕನ್ನಡದ್ದೇ. ಬರಹಗಾರನಾಗಿ ಅಮೆರಿಕದಲ್ಲಿದ್ದೇನೆ ಎನ್ನುವುದು ನನಗೊಂದು ಸಂಗತಿಯಾಗಬೇಕಿಲ್ಲ. ಓದುಗರಿಗೂ ಅಷ್ಟೇ. ಬೆಂಗಳೂರಿನ ಕಥೆ ಬರೆಯುವುದು ನನಗೆ ಕಷ್ಟ. ಸೂಕ್ಷ್ಮ ವಿವರಗಳು ಹಿಡಿಯುವುದು ತುಂಬಾ ಕಷ್ಟ. ಈಗ ನನ್ನೊಂದಿಗೆ ಬೆಳೆಯುತ್ತಿರುವ ವಿಶ್ವವನ್ನು ಹಿಡಿದಿಡುವುದು ಮುಖ್ಯ. ನನ್ನ ಸುತ್ತಲಿನ ಜಗತ್ತಿಗೆ ನನ್ನ ಬರವಣಿಗೆಯಿಂದಲೇ ಪ್ರತಿಕ್ರಿಯಿಸುತ್ತೇನೆ. ಕನ್ನಡದಲ್ಲಿಯಷ್ಟೇ ಬರೆಯುವುದು ನನಗೆ ಸಾಧ್ಯ ಹಾಗೂ ನಾನು ಕನ್ನಡ ಓದುಗರಿಗಾಗಿಯೇ ಬರೆಯುವುದು ಎನ್ನುವುದು ನನಗೆ ತಿಳಿದಿದೆ.

- **ಬರಹಗಾರನಿಗೆ ಇಡೀ ವಿಶ್ವದಲ್ಲಿ ಘಟಿಸುವ ಎಲ್ಲ ಸಂಗತಿಗಳು ತನ್ನ ಬರವಣಿಗೆಗಾಗಿಯೇ ಸಂಭವಿಸುತ್ತಿವೆ ಎನ್ನಿಸುವುದಿದೆ. ಅದೇರೀತಿ, ಚಿಕಿತ್ಸೆಗಾಗಿ ಬರುವ ರೋಗಿಗಳು ನಿಮಗೆ ಕಥೆಗಳಂತೆ ಕಾಣಿಸುವುದಿದೆಯಾ?**

ಪುಣ್ಯಕ್ಕೆ ನನ್ನ ಪಾತ್ರಗಳನ್ನು ನಾನು ಟ್ರೀಟ್ ಮಾಡಿ ಬೆಳೆಸಬೇಕಿಲ್ಲ. ಚಿಕಿತ್ಸೆ ನೀಡುವ ಸಂದರ್ಭದಲ್ಲಿ ನಾನೊಬ್ಬ ವೈದ್ಯ ಅಷ್ಟೇ. ಅದು ನನ್ನ ಅಸ್ತಿತ್ವದ ಪ್ರಶ್ನೆಯೂ ಹೌದು. ತುಂಬಾ ಶಿಸ್ತುಬದ್ಧವಾದ ವ್ಯವಸ್ಥೆ ಅಲ್ಲಿ. ಯಾರಾದರೂ ಎದೆನೋವು ಎಂದು ಆಸ್ಪತ್ರೆಗೆ ಬಂದರೆ